**ದಿನಾಂಕಃ09-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಯ ಪರ ಶ್ರೀ. ಎನ್.ಎಸ್. ಎಸ್ , ವಕೀಲರಿಂದ:-**

4. ನಿಪಿ-1 ರ ದಾವೆಯನ್ನು ನಾನು ಮತ್ತು ನನ್ನ ತಂಗಿಯಾದ ರಾಜೇಶ್ವರಿಯವರು ಸಲ್ಲಿಸಿರುತ್ತೇವೆ. ನಿಪಿ-1 ರ ದಾವೆಯಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ ಆಗಿರುವುದಿಲ್ಲ ಮತ್ತು ಅವರು ದಾವಾಸ್ವತ್ತನ್ನು ಮಾರಾಟ ಮಾಡಿದ ಕಾರಣದಿಂದ ಕಂಟ್ಮೆಂಟ್ ? ಆಗಿರುತ್ತದೆ ಮತ್ತು 2013 ನೇ ಸಾಲಿನಲ್ಲಿ ರಾಜಿಯನ್ನು ಮಾಡಿಕೊಂಡಿರುತ್ತಾರೆ. ಮಾರಾಟ ಮಾಡಿರುವ ದಾಖಲೆಯನ್ನು ಮತ್ತು ಕಂಟ್ಮೆಂಟ್ ? ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ದಾಖಲೆಗಳ ಬಗ್ಗೆ ನೀವು ವಾದಪತ್ರ ಮತ್ತು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಮತ್ತು ಸದರಿ ದಾಖಲೆಗಳು ನ್ಯಾಯಾಲಯದ ಕಡತದಲ್ಲಿಯೂ ಸಹ ಇರುವುದಿಲ್ಲ ನೀವು ಸದರಿ ದಾಖಲೆಯನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಅದರ ಬಗ್ಗೆ ನೋಡುತ್ತೇನೆ ಎನ್ನುತ್ತಾರೆ. ನಾನು ನಿಪಿ-1 ರಲಿಲ 2 ನೇ ವಾದಿಯವಾಗಿರುವ ರಾಜೇಶ್ವರಿರವರನ್ನು ಈ ದಾವೆಯಲ್ಲಿ ಸಾಕ್ಷಿ ವಿಚಾರಣೆ ಮಾಡುವುದಿಲ್ಲ.

5. ನಿಪಿ-1 ರ ದಾವೆಯನ್ನು ನಾವು 2006 ನೇ ಇಸವಿಯಲ್ಲಿ ಸಲ್ಲಿಸಿರುತ್ತೇವೆ. ನಿಪಿ-1 ರ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ಮತ್ತು ನನ್ನ ತಂಗಿಯ ಮದುವೆ ಆಗಿರುತ್ತದೆ ಮತ್ತು ನನ್ನ ಅಣ್ಣ ತಮ್ಮಂದಿರು ನನ್ನ ತಂದೆಯ ಜೊತೆಯಲ್ಲಿ

ವಾಸಿಸುತ್ತಿದ್ದರು. ನಮ್ಮ ತಂದೆ-ತಾಯಿಗೆ ಒಟ್ಟು 8 ಜನ ಮಕ್ಕಳು ಇದ್ದಾರೆ. ನನಗೆ 3 ಜನ ಅಣ್ಣಂದಿರು, ಇಬ್ಬರು ತಮ್ಮಂದಿರು ಮತ್ತು ಇಬ್ಬರು ತಂಗಿಯರು ಇದ್ದಾರೆ. ಪಂಕಜರವರು ನನ್ನ ತಂಗಿ. ನಿಪಿ-1 ರಂತೆ ರಾಜಿ ಆಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಅವರವರ ಹೆಸರಿಗೆ ದಾಖಲಗಳು ಆಗಿದೆಯಾ ಎಂದರೆ ಸಾಕ್ಷಿಯು ತನ್ನ ಹೆಸರಿನಲ್ಲಿ ದಾಖಲೆ ಆಗಿದೆ ಮತ್ತು ಉಳಿದವರ ಹೆಸರಿನಲ್ಲಿ ದಾಖಲೆಗಳು ಆಗಿರುವುದಿಲ್ಲ ಎನ್ನುತ್ತಾರೆ. ನಿಪಿ-1 ನ್ನು ನಾನು ದೊಡ್ಡಬಳ್ಳಾಪುರದ ಉಪನೋಂದಾಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತೇನೆ. ದಿ.17-07-2014 ರಂದು ನಿಪಿ-1 ರ ದಾವೆಯನ್ನು ನಾವು ರಾಜಿ ಮಾಡಿಕೊಂಡಿರುತ್ತೇವೆ.

6. ನಿಪಿ-1 ರ ದಾವೆಯು ರಾಜಿ ಮಾಡಿಕೊಳ್ಳುವ ಸಮಯದಲ್ಲಿ ಅಥವಾ ಅದಕ್ಕೂ ಮೊದಲು ದಾವಾಸ್ವತ್ತಿನಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದರು ಎಂದು ನಾನು ಹೇಳಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾವಾಸ್ವತ್ತು ತನ್ನ ಹೆಸರಿಗೆ ಬಂದ ನಂತರ ತಾನು ಪ್ರತಿವಾದಿಯನ್ನು ಹಲವಾರು ಬಾರಿ ಪ್ರಶ್ನೆ ಮಾಡಿರುತ್ತೇನೆ ಎನ್ನುತ್ತಾರೆ. ನಿಪಿ-1 ರ ದಾವೆಯ ಎಲ್ಲಾ ದಾಖಲೆಗಳಲ್ಲೂ ದಾವಾಸ್ವತ್ತಿನ ಸ್ವಾಧಿನದಲ್ಲಿ ನನ್ನ ತಂದೆಯವರು ಇದ್ದರು ಎಂದು ಹೇಳಿರುತ್ತೇನೆ. ನಿಮ್ಮ ತಂದೆಯೇ ದಾವಾಸ್ವತ್ತಿನ ಅಂಗಡಿ ವ್ಯವಹಾರದಲ್ಲಿ ಖುದ್ದಾಗಿ ಸ್ವಾಧೀನವನ್ನು ಹೊಂದಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

7. ನಾನು ವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಪ್ರತಿವಾದಿಯು ಯಾವ ಇಸವಿಯಿಂದ ದಾವಾಸ್ವತ್ತಿನಲ್ಲಿ ಬಾಡಿಗೆದಾರರಾಗಿ ಇದ್ದಾರೆ ಎಂದು ಹೇಳಿರುವುದಿಲ್ಲ ಮತ್ತು ಅದರ ಬಗ್ಗೆ ನನಗೆ

ಗೊತ್ತಿಲ್ಲ. ನನ್ನ ತಂದೆಯು ಯಾವ ವರ್ಷದಲ್ಲಿ ಪ್ರತಿವಾದಿಗೆ ದಾವಾಸ್ವತ್ತನ್ನು ಬಾಡಿಗೆಗೆ ನೀಡಿರುತ್ತಾರೆ ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಎಷ್ಟು ಬಾರಿ ಹೆಚ್ಚರಿಸಿದರೂ ಸಹ ಪಾಟೀ ಸವಾಲನ್ನು ಮಾಡಲು ಪ್ರತಿವಾದಿ ಪರ ವಕೀಲರಿಗೂ ಮತ್ತು ನ್ಯಾಯಾಲಯಕ್ಕೆ ತೊಂದರೆಯನ್ನು ನೀಡುತ್ತಿದ್ದರು.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**